**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿಸಿ. ನಂ.2222/2022**

ಫಿರ್ಯಾದಿ : **ಶ್ರೀ ಯತೀಶ ಬಿನ್ ಚಿಕ್ಕಣ್ಣ,**
ಸುಮಾರು 44 ವರ್ಷ,
ವ್ಯವಸಾಯಗಾರರು,
ಜಿಗಣೇಹಳ್ಳಿ ವಾಸ ಮತ್ತು ಅಂಚೆ
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ದ

ಆರೋಪಿಗಳು : 1. **ಶ್ರೀ ಮಂಜಪ್ಪ (ಗೌಡ),**
ಬಿನ್ ಶ್ರೀ ಮರಿಯಪ್ಪ,
ವಯಸ್ಸು ಸುಮಾರು 45 ವರ್ಷ,
ವ್ಯವಸಾಯಗಾರರು,

2. **ಶ್ರೀ ಲಕ್ಷ್ಮಣ (ಗೌಡ),**
ಬಿನ್ ಶ್ರೀ ಗಿಡ್ಡಮಲ್ಲಪ್ಪ,
ವಯಸ್ಸು ಸುಮಾರು 45 ವರ್ಷ,
ಗ್ರಾಮ ಪಂಚಾಯತಿ ಗ್ರಂಥಪಾಲಕರು,

3. **ಶ್ರೀ ಹನುಮಂತಪ್ಪ (ಗೌಡ),**
ಬಿನ್ ಶ್ರೀ ಪುಟ್ಟಪ್ಪ,
ವಯಸ್ಸು ಸುಮಾರು 44 ವರ್ಷ,
ವ್ಯವಸಾಯಗಾರರು,

4. **ಶ್ರೀ ಮಲ್ಲಪ್ಪ (ಗೌಡ),**
ಬಿನ್ ಶ್ರೀ ದೊಡ್ಡಪ್ಪ,
ವಯಸ್ಸು ಸುಮಾರು 48 ವರ್ಷ,
ವ್ಯವಸಾಯಗಾರರು,

**5. ಶ್ರೀ ಕುಮಾರ್ (ಗೌಡ),**
ಬಿನ್ ಶ್ರೀ ವಗ್ಗಪ್ಪ,
ವಯಸ್ಸು ಸುಮಾರು 48 ವರ್ಷ,
ವ್ಯವಸಾಯಗಾರರು,

**6. ಶ್ರೀ ಕುಮಾರ್ (ಗೌಡ),**
ಬಿನ್ ಶ್ರೀ ಮುದ್ದುಮಲ್ಲಪ್ಪ,
ವಯಸ್ಸು ಸುಮಾರು 45 ವರ್ಷ,
ವ್ಯವಸಾಯಗಾರರು,

**7. ಶ್ರೀ ಸಿದ್ದಪ್ಪ (ಗೌಡ),**
ಬಿನ್ ಶ್ರೀ ರಾಮಪ್ಪ,
ವಯಸ್ಸು ಸುಮಾರು 58 ವರ್ಷ,
ವ್ಯವಸಾಯಗಾರರು,

**8. ಶ್ರೀ ಪುಟ್ಟಪ್ಪ (ಗೌಡ),**
ಬಿನ್ ಶ್ರೀ ಮಲ್ಲಯ್ಯ,
ವಯಸ್ಸು ಸುಮಾರು 50 ವರ್ಷ,
ವ್ಯವಸಾಯಗಾರರು,

**9. ಶ್ರೀ ಸ್ವಾಮಿ ಯಾನೆ ಮಲ್ಲಪ್ಪ (ಗೌಡ),**
ಬಿನ್ ಶ್ರೀ ಕಳ್ಳಯ್ಯ,
ವಯಸ್ಸು ಸುಮಾರು 55 ವರ್ಷ,
ವ್ಯವಸಾಯಗಾರರು,

**10. ಶ್ರೀ ಮಹೇಶ್ವರಪ್ಪ (ಪೂಜಾರಿ),**
ಬಿನ್ ಶ್ರೀ ಚಿಕ್ಕಣ್ಣ,
ವಯಸ್ಸು ಸುಮಾರು 50 ವರ್ಷ,
ವ್ಯವಸಾಯಗಾರರು,

**11. ಶ್ರೀ ಶಿವಣ್ಣ (ಪೂಜಾರಿ),**
ಬಿನ್ ಶ್ರೀ ಪೂಜಾರಿ ಚಿಕ್ಕಣ್ಣ,
ವಯಸ್ಸು ಸುಮಾರು 40 ವರ್ಷ,
ವ್ಯವಸಾಯಗಾರರು,

ಎಲ್ಲರ ವಾಸ ಜಿಗಣೇಹಳ್ಳಿ ಗ್ರಾಮ,
ಕಡೂರು ತಾಲ್ಲೂಕು

## **:ದೋಷಾರೋಪಣೆ:**

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೇಯದಾಗಿ, ಆರೋಪಿಗಳಾದ ನಿಮಗೂ ಮತ್ತು ಪಿರ್ಯಾದುದಾರರ ಕುಟುಂಬದೊಂದಿಗೆ ಮೊದಲಿನಿಂದಲೂ ಓಡಾಡುವ ಜಾಗದ ವಿಚಾರವಾಗಿ ವ್ಯಾಜ್ಯ ಇದ್ದು ಸದರಿ ವಿಚಾರವಾಗಿ ಪಿರ್ಯಾದುದಾರರು ಪೋಲೀಸ್ ಠಾಣೆಗೆ ದೂರನ್ನು ಸಲ್ಲಿಸಿ ಕಡೂರಿನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆಯನ್ನು ಸಲ್ಲಿಸಿರುವ ವಿಚಾರವಾಗಿ ಹಾಗೂ ಹಳೆಯ ದ್ವೇಷದಿಂದ ದಿನಾಂಕ 10.03.2016ರಂದು ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದುದಾರರ ಊರಾದ ಜಿಗಣೇಹಳ್ಳಿ ಊರಿನ ಬೀದಿ ಬೀದಿಗಳಲ್ಲಿ ತಮಟೆ ಬಾರಿಸುವ ಮೂಲಕ ಪಿರ್ಯಾದುದಾರರ ಕುಟುಂಬದ ವಿರುದ್ಧ ಅವಮಾನೀಯವಾಗಿ ವರ್ತಿಸಿ ಅವರಿಗೆ ಪ್ರಾಣ ಭಯ, ದೌರ್ಜನ್ಯ ಹಾಗೂ ಸಾಮಾಜಿಕ ಬಹಿಷ್ಕಾರದ ಪ್ರಚಾರ ಮಾಡಿ ಪಿರ್ಯಾದುದಾರಿಗೆ ಮಾನಹಾನಿಯನ್ನುಂಟು ಮಾಡಿದ್ದು, ಆದಕಾರಣ 1 ರಿಂದ 11ನೇ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 500 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳದಲ್ಲಿ, ಸಮಾನ ಉದ್ದೇಶದಿಂದ ಮುಂದುವರಿದು, ಆರೋಪಿಗಳಾದ ನೀವು ಪಿರ್ಯಾದುದಾರರ ಕುಟುಂಬದೊಂದಿಗಿನ ಹಳೆಯ ದ್ವೇಷದಿಂದ ಪಿರ್ಯಾದುದಾರರ ತಂಗಿಯಾದ ಮಂಜುಳಾರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ, ಅವರಿಗೆ ಅವಮಾನ ಮಾಡಿದ್ದು, ಆದಕಾರಣ 1 ರಿಂದ 11ನೇ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ 16.02.2024

**ಸಹಿ/-**
**(ಶ್ರೀಮತಿ ಸವಿತರಾಣಿ ಹೆಚ್.ವಿ.)**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**